





# ಪುಟಾಣಿ ಕಲಾಕೃತಿ..!

ಅಕ್ಕಿ ಕಾಳಿನಲ್ಲಿ ಚಿತ್ರ ಬರೆಯುವುದನ್ನು ನೀವು ಕೇಳಿರುತ್ತೀರಿ. ಹೆಚ್ಚು ಕಡಿಮೆ ಅಕ್ಕಿ ಕಾಳಿನ ಗಾತ್ರದ ಕಲಾಕೃತಿಗಳನ್ನು ಈ ಚಿತ್ರಗಳಲ್ಲಿ ನೋಡಿ. ಇಂಥ ಕಲಾಕೃತಿಗಳನ್ನು ರಚಿಸುವುದು ಸುಲಭದ ಸಂಗತಿಯಲ್ಲ. ಸೂಕ್ಷ್ಮ ದೃಷ್ಟಿ, ಕಲಾವಂತಿಕೆ, ಅಪಾರ ಸಂಯಮ... ಇದಕ್ಕೆ ಬೇಕು. ಕಳೆದ 19 ವರ್ಷಗಳಿಂದ ನಿರಂತರವಾಗಿ ಈ ಕಲೆಯಲ್ಲಿ ತನ್ನನ್ನು ತೊಡಗಿಸಿಕೊಂಡವರು ಕಾಂಪ್ಬೆಲ್ ಸ್ಯಾಡಿ. ಇಷ್ಟು ಸುದೀರ್ಘ ಅವಧಿಯಲ್ಲಿ ಅವರು ಕಲಾಸೃಷ್ಟಿಯಿಂದ ರಜೆ ಪಡೆದದ್ದು ಕೇವಲ ಎರಡು ಸಲ ಮಾತ್ರ. ಅದೂ ತನ್ನ ಎರಡು ಮಕ್ಕಳ ಹೆರಿಗೆ ಸಂದರ್ಭದಲ್ಲಿ!

ಅವರು ಸೃಷ್ಟಿಸಿದ್ದು ಪ್ರಾಣಿ, ಪಕ್ಷಿ, ಪಾತರಗಿತ್ತಿ, ಕೀಟ ಮುಂತಾದವುಗಳನ್ನು. ಆ ಕಲಾಕೃತಿಗಳ ಗಾತ್ರ ನೈಜ ಗಾತ್ರಕ್ಕಿಂತ ಸರಿಸುಮಾರು 12 ಪಟ್ಟು ಚಿಕ್ಕವು. ಅದಕ್ಕಾಗಿ ಅವರು ಬಳಸಿದ್ದು ಸಣ್ಣ ಚಿಮಟಾ ಹಾಗೂ ಭೂತಗನ್ನಡಿಗಳನ್ನು.

50 ವರ್ಷದ ಸ್ಯಾಡಿ ಒಂದು ಕಲಾಕೃತಿ ನಿರ್ಮಿಸಲು ಸುಮಾರು ಎರಡು ವಾರಗಳಷ್ಟು ಕಾಲ ತುಂಬ ತಾಳ್ಮೆಯಿಂದ ಮನಸ್ಸು ಕೊಟ್ಟು ದುಡಿಯುತ್ತಾರೆ. ಅದಕ್ಕಾಗಿ ಅವಳು ಹದಗೊಳಿಸಿದ ಮಣ್ಣು ಹಾಗೂ ಕೆಲವು ಸಿಂಥೆಟಿಕ್ ವಸ್ತುಗಳನ್ನು ಬಳಸುತ್ತಾರೆ. ಅವಳ ಒಂದು ಕಲಾಕೃತಿಯ ಬೆಲೆ 15 ಪೌಂಡ್. ಭಾರತೀಯ ಲೆಕ್ಕದಲ್ಲಿ 4988 ರೂಪಾಯಿ. ಅವರ ಶ್ರಮ ಹಾಗೂ ಕಲಾ ಕುಸುರಿಗೆ ಇದು ತೀರ ಕಡಿಮೆ ಎಂದೇ ಹೇಳಬಹುದು.

ಅಂದ ಹಾಗೆ ಇವರು ಇರುವುದು ಬ್ರಿಟನ್ ದೇಶದ ನೋರಫೋಕ್ ಪ್ರಾಂತ್ಯದ ಡೇರಹ್ಯಾಮ್ ಪಟ್ಟಣದಲ್ಲಿ.

■ ಸುಭಾಸ ಯಾದವಾಡ